## ನಿಜವಾದ ಕನ್ನಡಿಗರೆಂದರೆ...

ನಮ್ಮೂರಿನ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಾನು ತುಸು ಆವೇಶದಿಂದ ಭಾಷಣ ಮಾಡುತ್ತಾ, 'ನಿಜವಾದ ಕನ್ನಡಿಗರೆಂದರೆ ಯಾರು?' ಎನ್ನುವಷ್ಟರಲ್ಲಿ ಸಭೆಯ ಮುಂದಿನ ಸಾಲಿನಲ್ಲಿ ಕುಳಿತಿದ್ದವನೊಬ್ಬ ದಿಗ್ಗನೆ ಎದ್ದು ನಿಂತು, 'ನಿಜವಾದ ಕನ್ನಡಿಗರೆಂದರೆ ಈ ಮಣ್ಣಿನ ವೀರನಾರಿಯರಲ್ಲದೆ ಇನ್ನ್ಯಾರು?' ಎಂದು ಅಬ್ಬರಿಸಿದ. 'ಅದನ್ನು ಯಾವ ಆಧಾರದ ಮೇಲೆ ಹೇಳುತ್ತೀರಿ?' ಎಂದೆ. ಆತ, 'ಅವರಷ್ಟು ಹೊತ್ತು ಕನ್ನಡಿಯ ಮುಂದೆ ನಿಲ್ಲುವ ಸ್ಥೈರಣೆ ಬೇರೆ ಯಾರಿಗಿದೆ?' ಎಂದಾಗ ಸಭಿಕರಿಂದ ಚಪ್ಪಾಳೆಯ ಸುರಿಮಳೆ.

**ಮಲ್ಲಿಕಾರ್ಜುನ ಸುರಧೇನುಪುರ**





## ಚೌಕಾಸಿ

ನನ್ನ ಹೆಂಡತಿ ಲಲಿತಾ ಅಂಗಡಿಗೆ ಹೋಗಿ ಏನೇ ಸಾಮಾನು ತರಲಿ ವಿಪರೀತ ಚೌಕಾಸಿ ಮಾಡುವ ಬುದ್ಧಿ. ಅಂದು ಅವಳು ನನಗೆ, 'ರೀ ಅಂಗಡಿಗೆ ಹೋಗಿ ಸಕ್ಕರೆ, ಗೋದಿಹಿಟ್ಟು ಹಾಗೇ ಒಂದಿಷ್ಟು ತರಕಾರಿ ತನ್ನಿ' ಎಂದಳು. ನಾನು ಅದೇ ಮೊದಲ ಬಾರಿಗೆ ಅಂಗಡಿಗೆ ಹೋದದ್ದು. ಅಂಗಡಿಯವಳಿಗೆ, 'ಒಂದು ಸೌತೇಕಾಯಿಗೆ ಎಷ್ಟಮ್ಮಾ?' ಎಂದು ಕೇಳಿದೆ. ಅವಳು, 'ಒಂದಕ್ಕೆ ಹತ್ತು ರೂಪಾಯಿ. ಇಪ್ಪತ್ತು ರೂಪಾಯಿಗೆ ಮೂರು' ಎಂದಳು. ನಾನು, 'ನಾಲ್ಕು ಕೊಡಮ್ಮ' ಎಂದು ಕೇಳಿದೆ. ಅದಕ್ಕೆ ಅವಳು, 'ಏನ್ಸಾರ್, ಇಷ್ಟೊಂದು ಚೌಕಾಸಿ ಮಾಡ್ತೀರಾ? ನೀವು ಲಲಿತಮ್ಮನ ಯಜಮಾನರಾ?' ಎಂದು ಕೇಳಿಬಿಡುವುದೇ?

**ಎಂ.ಕೆ. ಮಂಜುನಾಥ್**



ಕಲೆ: ಗಣೇಶ ಆಚಾರ್ಯ